**ಸಿ.ಸಿ. ನಂ. 1351/2015        ಪಿ.ಡಬ್ಲೂ-2        ಹೆಸರು -  ಶಿವಮ್ಮ**

**ಸಾಕ್ಷಿಯನ್ನು ದಿನಾಂಕಃ  25/09/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ. ರವರಿಂದಃ-**

ನೈಟಿ, ಟವಲ್ ಮತ್ತು ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. **ಪ್ರಾಜ್ಞ ಆರೋಪಿ ಪರ ವಕೀಲರು ಮುದ್ದೆ ಮಾಲು ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.** ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1, 2 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿಯು ಗೈರು ಹಾಜರು ಇದ್ದು, 3 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ಪ್ರಾಜ್ಞ ಆರೋಪಿ ಪರ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ( ಪ್ರಾಸಾ-1 ರವರ ಮುಖೇನ ಮಚ್ಚು, ಟವಲ್ ಮತ್ತು ನೈಟಿಯನ್ನು ಎಂ.ಓ-1 ರಿಂದ 3 ಎಂದು ಈಗಾಗಲೇ ಗುರುತಿಸಲಾಗಿದೆ. )

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿತರ ಮನೆ ನಮ್ಮ ಮನೆಯ ಬಳಿ ಇದೆ. ಮನೆಯ ವಿಚಾರದಲ್ಲಿ ನಮಗೂ ಮತ್ತು ಆರೋಪಿತರ ನಡುವೆ ವ್ಯಾಜ್ಯ ಇದೆ ಎಂದರೆ ಸರಿ. ಜಗಳವಾಗುವಾಗ ನಾನು ಮನೆಯ ಒಳಗಡೆ ಇದ್ದು, ಶಬ್ದ ಕೇಳಿದ ನಂತರ ಆಚೆ ಬಂದಿರುತ್ತೇನೆ. ಆರೋಪಿತರು ಕೂಡ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ. ಅದಕ್ಕಾಗಿ ನಾವು ಆರೋಪಿತರ ವಿರುದ್ಧ ದೂರು ನೀಡಿದ್ದೇವೆ ಎಂದರೆ ಸಾಕ್ಷಿಯು ಮೊದಲು ನಾವು ದೂರು ನೀಡಿದ್ದೇವೆ ಎಂದು ನುಡಿಯುತ್ತಾರೆ. ಗಲಾಟೆಯಾದ ಎಷ್ಟು ದಿನಗಳ ನಂತರ ದೂರು ನೀಡಲಾಗಿದೆ ಎಂದು ನನಗೆ ನೆನಪಿಲ್ಲ, ಸಾಕ್ಷಿ ಮುಂದುವರೆದು ನನ್ನ ಮಗ ದೂರು ನೀಡಿದ್ದು ಎಂದು ನುಡಿಯುತ್ತಾರೆ. ಗಲಾಟೆ ನಡೆದ ದಿನವೇ ದೂರು ನೀಡಲು ತೊಂದರೆ ಇತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆಸ್ಪತ್ರೆಗೆ ಹೋಗಿದ್ದೆವು ಎಂದು ನುಡಿಯುತ್ತಾರೆ. ನಮ್ಮ ಮನೆಯ ಅಕ್ಕ ಪಕ್ಕ ಮನೆಗಳು ಇವೆ. ಗಲಾಟೆ ನಡೆದಾಗ ರಾತ್ರಿ 8.00 ಗಂಟೆಯಾಗಿತ್ತು. ಗಲಾಟೆಯಾದಾಗ ಸಾಕಷ್ಟು ಜನರು ಸೇರಿದ್ದರು. ಗಲಾಟೆ ನಡೆದ ಸ್ಥಳದಲ್ಲಿ ಕತ್ತಲೆ ಇತ್ತು ಎಂದರೆ ಸಾಕ್ಷಿಯು ಲೈಟ್ ಬೆಳಕಿತ್ತು ಎಂದು ನುಡಿಯುತ್ತಾರೆ. ನಾವು ಮತ್ತು ಆರೋಪಿತರು ಪರಸ್ಪರ ತಳ್ಳಾಡುತ್ತಿದ್ದರು ಎಂದರೆ ಸರಿ. ತಳ್ಳಾಟದಲ್ಲಿ ಬಿದ್ದು ನಾನು ಪೆಟ್ಟು ಮಾಡಿಕೊಂಡಿದ್ದೇನೆ, ಯಾರು ಕೂಡ ನನಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಈಗ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿದ್ದೇವೆ. ಆರೋಪಿತರು ನಮ್ಮ ವಿರುದ್ಧ ದೂರು ನೀಡಿದ್ದರಿಂದ್ದಾಗಿ ಆರೋಪಿತರ ವಿರುದ್ಧ ನಾವು ದೂರು ನೀಡಿದ್ದೇವೆ

ಎಂದರೆ ಸಾಕ್ಷಿಯು ಮೊದಲು ನಾವು ದೂರು ನೀಡಿದ್ದೆವು ನಂತರ ಅವರು ನೀಡಿದರು ಎಂದು ನುಡಿಯುತ್ತಾರೆ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಪ್ರಾಜ್ಞ ಸ.ಸ.ಅ. ರವರಿಂದಃ-**

ಗ್ರಾಮದಲ್ಲಿ ಹಿರಿಯರ ಸಮಕ್ಷಮ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿದ್ದೇವೆ. ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**